ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂ:ಸಿ೫(3) ಫ್ಯಾಕ್ಸ್ ಯಂ .ವಾ.ನಿ 19/2013-14 ದಿನಾಂಕ:15-6-2013

ಪ್ರಕಟಣೆ

ವಿಷಯ: ಕಛೇರಿಯ ಆರು ಫ್ಯಾಕ್ಸ್ ಯಂತ್ರಗಳ ವಾರ್ಷಿಕ ನಿರ್ವಹಣೆಗೆ ದರಪಟ್ಟಿ ಸಲ್ಲಿಸುವ ಬಗ್ಗೆ..

ಈ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆರು ಫ್ಯಾಕ್ಸ್ ಯಂತ್ರಗಳ ವಾರ್ಷಿಕ ನಿರ್ವಹಣೆ ಮಾಡಲು ಒಂದು ವರ್ಷದ ಅವಧಿಗೆ ತಗಲುವ ವೆಚ್ಚದ ಬಗ್ಗೆ ನಿಮ್ಮ ಸಂಸ್ಥೆಯ ಕಡಿಮೆ ದರವನ್ನು ನಮೂದಿಸಿ ಸೀಲ್ ಮಾಡಿದ ಲಕೋಟೆಯನ್ನು ದಿನಾಂಕ:24-6-2013ರ ಒಳಗಾಗಿ ಕೆಳಗೆ ಸಹಿ ಮಾಡಿರುವ ವಿಳಾಸಕ್ಕೆ ಕಳುಹಿಸುವುದು. ನಂತರ ಕಳುಹಿಸುವ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.

**ವಾರ್ಷಿಕ ನಿರ್ವಹಣೆಯು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

1. ಸೇವಾ ನಿರ್ವಹಣೆಯ ಕರಾರು ಒಂದು ವರ್ಷದ ಅವಧಿಯದಾಗಿರುತ್ತದೆ.
2. ಈ ಅವಧಿಯಲ್ಲಿ ಯಂತ್ರ ಯಾವ ಯಾವ ಬಿಡಿ ಭಾಗಗಳ ನಿರ್ವಹಣೆಯಲ್ಲಿ ಸೇರಿರುವ ಹಾಗೂ ಎ.ಎಂ.ಸಿಯಲ್ಲಿ ಸೇರಿಲ್ಲದೆ ಇರುವ ಬಿಡಿ ಭಾಗಗಳ ಬಗ್ಗೆ ಪ್ರತ್ಯೇಕವಾಗಿ ನಮೂದಿಸಬೇಕು.
3. ಯಂತ್ರದ ದುರಸ್ಥಿ ಸಂದರ್ಭದಲ್ಲಿ ಈ ಕಛೇರಿಯಿಂದ ದೂರವಾಣಿ ಕರೆ ಸ್ವೀಕರಿಸಿದ 24 ಗಂಟೆಗಳ ಒಳಗಾಗಿ ಬಂದು ದುರುಸ್ಥಿ ಮಾಡಬೇಕು.
4. ವಾರ್ಷಿಕ ನಿರ್ವಹಣೆಯ ಒಟ್ಟು ದರವನ್ನು ಶೇ 75ರ ಹಾಗೂ ಶೇ 25ರ ಅನುಪಾತದಲ್ಲಿ ಅಂದರೆ ಪ್ರಥಮವಾಗಿ ಶೇ 75ರಷ್ಟು ಮೊತ್ತ ಆರು ತಿಂಗಳ ಅವಧಿ ಪೂರ್ಣಗೊಂಡ ನಂತರ ಶೇ 25 ರಷ್ಟು ಮೊತ್ತವನ್ನು ಪಾವತಿಸಲಾಗುವುದು. ಈ ಅವಧಿಯಲ್ಲಿ ಸಂಸ್ಥೆಯಿಂದ ನೀಡುವ ಸೇವೆಯು ತೃಪ್ತಿಕರವಾಗಿರಬೇಕು.
5. ಸೇವೆಯು ತೃಪ್ತಿಕರವಾಗಿರದಿದ್ದ ಪಕ್ಷದಲ್ಲಿ ವಾರ್ಷಿಕ ಸೇವಾ ನಿರ್ವಹಣೆ ಆದೇಶವನ್ನು ರದ್ದುಪಡಿಸುವ ಅಧಿಕಾರ ಇಲಾಖೆಯದಾಗಿರುತ್ತದೆ.
6. ನೀವು ನೀಡುವ ದರದಲ್ಲಿ ಎಲ್ಲಾ ಸೇವಾ ಕರಗಳು ಮತ್ತು ತೆರಿಗೆಗಳು ಒಳಗೊಂಡಿರಬೇಕು.
7. ಸೇವಾ ನಿರ್ವಹಣೆಯನ್ನು ಸಕಾಲದಲ್ಲಿ ನಿರ್ವಹಿಸದಿದ್ದಲ್ಲಿ ಎ.ಎಂ.ಸಿಯ ಮೊತ್ತಕ್ಕೆ ಶೇ: 2ರಷ್ಟು ಸಂಸ್ಥೆಯಿಂದ ದಂಡ ರೂಪದಲ್ಲಿ ವಸೂಲು ಮಾಡಲಾಗುವುದು.

[ಕೆ.ಪಿ.ಹನುಮಂತರಾಯಪ್ಪ]
ಅಪರ ಆಯುಕ್ತರು [ಆಡಳಿತ] [ಹೆ.ಪ್ರ]

ರವರಿಗೆ:

1. ಹೈಟೆಕ್ ಆಫೀಸ್ ಆಟೋಮೇಷನ್, ನಂ.66, ಎಸ್.ಜೆ.ಪಿ.ರಸ್ತೆ, ಬೆಂಗಳೂರು-2
2. ಪೆಸಿಫಿಕ್ ಎಲೆಕ್ಟ್ರಾನಿಕ್ಸ್ ಇಂಕ್, ನಂ.46, ಪೈಪ್‌ಲೈನ್ ರೋಡ್, ಶೇಷಾದ್ರಿಪುರಂ, ಬೆಂಗಳೂರು-22
3. ಎ.ಬಿ.ಎ ಸರ್ವಿಸಸ್, ನಂ.11/1, 2ನೇ ಮಹಡಿ, 7ನೇ ಮೈನ್ ರಸ್ತೆ, 7ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3